**ದಿನಾಂಕಃ 01/10/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ JDR ಪರ ವಕೀಲರಿಂದಃ**

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

1. ಒ.ಎಸ್.343/2022 ರ ವಾದ ಪತ್ರ, ಮೌಲ್ಯ ನಿರ್ಧರಣ ಪಟ್ಟಿ ಆದೇಶ ಪುಟದ ದೃಢೀಕೃತ ನಕಲನ್ನು ನಿಡಿ.1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಡಿಕ್ರಿದಾರರ ಪರ ಶ್ರೀ ಹೆಚ್.ಕೆ.ಎಸ್ ವಕೀಲರಿಂದಃ**

2. ನನ್ನ ತಂದೆಯ ಹೆಸರು ಸಣ್ಣತಮ್ಮನಾಯಕ. ನನ್ನ ವಿರುದ್ಧ ಅಸಲು ದಾವಾ ಸಂಃ 332/2017 ದಾವೆ ಹೂಡಿದ್ದರು ಎಂದರೆ ಸರಿ. ನನ್ನ ವಿರುದ್ಧ ದಿಃ 20/11/2021 ರಂದು ಡಿಕ್ರಿಯಾಯಿತು ಎಂದರೆ ಸರಿ. ನಾನು ಸದರಿ ಡಿಕ್ರಿಯ ವಿರುದ್ಧ ಮೇಲ್ಮನವಿ ಸಲ್ಲಿಸಿಲ್ಲ. ನನ್ನ ತಂದೆ ತೀರಿಹೋದ ಕಾರಣ ನಾನು ಮೇಲ್ಮನವಿಯನ್ನು ಸಲ್ಲಿಸಲು ತೊಂದರೆಯಾಗಿತ್ತು. ನನ್ನ ತಂದೆ ತೀರಿಕೊಂಡು ಸುಮಾರು 2-3 ವರ್ಷ ಕಳೆದಿದೆ. ನನ್ನ ತಂದೆಯ ಕಾರ್ಯ ಮುಗಿದ ಮೇಲೆ ಮೇಲ್ಮನವಿ ಸಲ್ಲಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ವಾದಿ ರಾಜೀ ಮಾಡಿಕೊಳ್ಳುತ್ತೇನೆಂದು ಹೇಳುತ್ತಿದ್ದರು ಮತ್ತು ಆತ ನಮಗೆ ಸಿಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. 2021 ರ ನಂತರ ನಾನು ವಾದಿಯನ್ನು ರಾಜೀಗೆ ಕರೆದಿದ್ದೆ. ಆದರೆ ಅವರು ಬರಲಿಲ್ಲ. ನಾನು ವಾದಿಯನ್ನು ರಾಜೀಗೆ ಕರೆದಿರಲಿಲ್ಲ ಎಂದರೆ ಸರಿಯಲ್ಲ.

3. ಈ ಅರ್ಜಿಯಲ್ಲಿ ನಾನು ಏನು ತಕರಾರು ಸಲ್ಲಿಸಿದ್ದೇನೆಂದು ಮಾಹಿತಿ ಇಲ್ಲ. 2016-17 ರಲ್ಲಿ ಸರ್ವೆ ನಂ.69/5, 50/8, 92/5 ನನ್ನ ಭಾಗಕ್ಕೆ ಬಂದಿತ್ತು ಎಂದರೆ ಸರಿ. ಆದರೆ ಸದರಿ ಸ್ವತ್ತುಗಳ ಮೇಲೆ ನನ್ನ ಚಿಕ್ಕಪ್ಪನ ಮಗ ದಾವೆ ಹೂಡಿದ್ದಾರೆ. ನಮ್ಮ ಅಣ್ಣಂದಿರಿಗೆ ಮೂರುವರೆ-ನಾಲ್ಕು ಎಕರೆ ಜಮೀನು ಭಾಗ ಬಂದಿದೆ. ಅದರ ಮೇಲೆ ದಾವೆ ಹೂಡಿದ್ದಾರೆ. ಅದರ ಸರ್ವೆ ನಂಬರ್‌ಗಳು ಗೊತ್ತಿಲ್ಲ. ನಿಡಿ.1 ರಲ್ಲಿರುವ ಸಣ್ಣಪ್ಪ ನಾಯಕ ನನ್ನ ಚಿಕ್ಕಪ್ಪನಾಗಬೇಕು. ಜವರಮ್ಮ ನನ್ನ ತಂದೆಯ ತಂದೆಯ ಹೆಂಡತಿ. ನಿಂಗನಾಯಕ, ದ್ಯಾವನಾಯಕ ಮತ್ತು ಸಣ್ಣನಾಯಕ ನನ್ನ ಚಿಕ್ಕಪ್ಪಂದಿದಿರು. ಚೆಲುಮ್ಮ ನನ್ನ ತಾಯಿ.

4. ಈ ಪ್ರಕರಣದಲ್ಲಿ ವಾದಿಗೆ ಹಣವನ್ನು ನೀಡುವುದನ್ನು ತಪ್ಪಿಸಲು ನನ್ನ ಚಿಕ್ಕಪ್ಪನ ಮಗನ ಮುಖಾಂತರ ಅಸಲು ದಾವಾ ಸಂಃ 343/2022 ನ್ನು ಹೂಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿರುವ ವಾದಿಗಳು ಮತ್ತು ಪ್ರತಿವಾದಿಗಳು ನನಗೆ ಸಂಬಂಧಿಕರಲ್ಲ ಮತ್ತು ವಾದಿಗೆ ಹಣವನ್ನು

ನೀಡಬೇಕೆಂಬ ದುರುದ್ದೇಶದಿಂದ ಸದರಿ ದಾವೆ ಹೂಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆ ಯಾವ ಹಂತದಲ್ಲಿದೆ ಎಂದು ನನಗೆ ಗೊತ್ತಿಲ್ಲ. ದಿಃ02/12/2023ರ ನಂತರದ ಆದೇಶಪುಟವನ್ನು ದುರುದ್ದೇಶದಿಂದ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ವಾಸಿಸಲು ಮನೆ ಇದೆ. ನನಗೆ ಬ್ಯಾರೇನ್ ಸಹ ಇದೆ. ಅದು ನನ್ನ ಹೆಸರಿನಲ್ಲಿಲ್ಲ. ಅದರ ಪಾಸ್ ಬುಕ್ ಮತ್ತು ಲೈಸೆನ್ಸ್ ನನ್ನ ತಂದೆಯ ಹೆಸರಿನಲ್ಲಿದೆ. ಮನೆಯ ಮೇಲೂ ಸಹ ದಾವೆ ಇದೆ. ದಾಯಾದಿಗಳ ಜಗಳವಾದ ಕಾರಣ ಲೈಸೆನ್ಸ್‌ನ್ನು ವರ್ಗಾವಣೆ ಮಾಡಿಕೊಂಡಿಲ್ಲ. ಜಮೀನನ್ನು ನಮ್ಮ ಹೆಸರಿಗೆ ಖಾತೆ ಮಾಡಿಕೊಂಡ ನಂತರ ನನ್ನ ಚಿಕ್ಕಪ್ಪನ ಮಗ ದಾವೆ ಹೂಡಿರುತ್ತಾರೆ.

5. ನಾನು ಈಗ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿಲ್ಲ. ಬೇರೆಯವರ ಅರ್ಧ ಎಕರೆ ಜಮೀನಿನಲ್ಲಿ ಕೂಲಿ ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದೇನೆ. ಬೇರೆಯವರ ಜಮೀನುದಾರರೊಂದಿಗೆ ಕರಾರು ಮಾಡಿಕೊಂಡಿಲ್ಲ. 2022-23ರಲ್ಲಿ ನನಗೆ ಸೇರಿದ ಸ್ವತ್ತುಗಳಲ್ಲಿ ರಾಗಿ ಮತ್ತು ತಂಬಾಕು ಬೆಳೆಯನ್ನು ಬೆಳೆದಿದ್ದೆವು ಎಂದು ಆರ್.ಟಿ.ಸಿಯಲ್ಲಿ ಕಾಣಿಸಲಾಗಿದೆ ಎಂದರೆ ಸರಿಯಲ್ಲ. ತಹಶೀಲ್ದಾರ್ ಕಚೇರಿಯಲ್ಲಿ ಸದರಿ ಆರ್.ಟಿ.ಸಿಯಲ್ಲಿ ನಾವು ಬೆಳೆ ಬೆಳೆಯದಿದ್ದರೂ ಏಕೆ ನಮೂದಿಸಿದ್ದೀರಿ ಎಂದು ಪ್ರಶ್ನಿಸಿಲ್ಲ. ನಾನು ಬೇರೆಯವರ ಜಮೀನಿನಲ್ಲಿ ಕೂಲಿ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ನಿಡಿ.1ರಲ್ಲಿ ನಮೂದಿಸಿರುವ ದಾಖಲೆಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಮತ್ತು ತಕರಾರಿನಲ್ಲಿ ಸಲ್ಲಿಸಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**